# ಬಸವಣ್ಣನ ವಚನಗಳಲ್ಲಿ ಸಮ ಸಮಾಜದ ಪ್ರಸ್ತುತತೆ

**ಮಾಧವ ಎಂ. ಕೆ.**

ಮುಖ್ಯಸ್ಥರು, ಕನ್ನಡ ವಿಭಾಗ, ವಿಶ್ವ ವಿದ್ಯಾನಿಲಯ ಕಾಲೇಜು, ಮಂಗಳೂರು.

**Received: 24-04-2024** ; **Acepted: 10-05-2024 ; Published: 08-06-2024**

**DOI: https://doi.org/10.5281/zenodo.11525708**

## ABSTRACT:

ಕನ್ನಡ ಸಾಹಿತ್ಯದಲ್ಲಿ ೧೨ನೇ ಶತಮಾನವನ್ನು ವಚನಗಳ ಯುಗವೆಂದು ಕರೆಯಲಾಗುತ್ತದೆ. ಬಸವಣ್ಣ ವಚನ ಸಾಹಿತ್ಯಕ್ಕೆ ಹೊಸ ಭಾಷ್ಯ ಬರೆದವನು. ತನ್ನ ವಚನಗಳ ಮೂಲಕ 'ಕಾಯಕವೇ ಕೈಲಾಸ' ವೆಂದು ಸಾರಿ, ಜನರಲ್ಲಿ ದುಡಿದು ತಿಂದು ಬದುಕುವ ಮಹತ್ವವನ್ನು ತಿಳಿಸಿದರು. ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ತ್ರೀಯರಿಗೆ ಭಾಗವಹಿಸುವ ಸಮಾನ ಅವಕಾಶ ನೀಡುವ ಮೂಲಕ ಮಹಿಳಾ ಸ್ವಾತಂತ್ರ್ಯಕ್ಕೊಂದು ಅರ್ಥವನ್ನು ಕಲ್ಪಿಸಿದರು. ಕಲುಷಿತಗೊಂಡಿದ್ದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ದಿಕ್ಕರಿಸಿ, ಘನ ಬದಲಾವಣೆಯನ್ನು ಆರಿಸಿ ಹೊರಟ ದಾರ್ಶನಿಕ ಬಸವಣ್ಣ. ಸಾಮಾಜಿಕ ಬದಲಾವಣೆಗೆ ಹೊಸ ಭಾಷ್ಯ ಬರೆಯುವ ಮೂಲಕ ಉತ್ತಮ ಸಮಾಜ ವ್ಯವಸ್ಥೆಗೆ ನಿಜವಾದ ಅರ್ಥ ಕಲ್ಪಿಸಿ ಕೊಟ್ಟವರು. ಸಮಾಜದ ಕೀಳುಮಟ್ಟದ ಶೋಷಣೆಯಿಂದಾಗಿಯೇ ಸಮಾಜದಲ್ಲಿ ದುಡಿಯುವ ಮತ್ತು ಕೂತು ಉಣ್ಣುವ ವರ್ಗಗಳು ನಿರ್ಮಾಣವಾಗುವುದಕ್ಕೆ ಕಾರಣವಾಗಿರಬೇಕು, ಸಮಾಜದಲ್ಲಿ ಮೇಲ್ವರ್ಗವೆಂದು ಕರೆಸಿಕೊಂಡ ಜನರು ಸಮಾಜದ ಇತರರನ್ನು ಕೀಳಾಗಿ ಕಾಣುತ್ತಿದ್ದ ಸಂದರ್ಭಗಳು ಬಸವಣ್ಣನ ಮನಸ್ಸನ್ನು ಬಹಳವಾಗಿ ಕಾಡಿದ್ದರ ಪರಿಣಾಮದಿಂದಲೇ ಅವರ ಮನಸ್ಸಿನ ವಿಚಾರಗಳೆಲ್ಲ ವಚನಗಳಾಗಿ ಮಾರ್ಪಟ್ಟವಾಗಿರಬೇಕು. ಅಂದಿನಿಂದಲೇ ಬಸವಣ್ಣನವರು ಸಾಮಾಜಿಕ ಬದಲಾವಣೆಗೆ ಕ್ರಾಂತಿಕಾರಿ ಹೆಜ್ಜೆ ಇಟ್ಟರೆಂದು ಕಾಣಿಸುತ್ತದೆ. ಬಸವಣ್ಣ ವಚನಗಳ ಮೂಲಕ ಸಾಮಾಜಿಕ ವ್ಯವಸ್ಥೆಯ ಅಂಕುಡೊಂಕುಗಳನ್ನು ತಿದ್ದಿ, ಸಮ ಸಮಾಜ ವ್ಯವಸ್ಥೆಯನ್ನು ಸರಿಪಡಿಸುವ ಕಾಯಕಕ್ಕೆ ಮುಂದಾದರು. ಒಂದಷ್ಟು ಸಮಾಜ ವ್ಯವಸ್ಥೆಯನ್ನು ಬದಲಿಸಲು ಪಟ್ಟ ಪ್ರಯತ್ನ ಇಂದಿಗೂ ಮುಂದಿಗೂ ಮಾದರಿಯಾಗುವಂತಿದೆ. ಸಮಾಜದ ಬಗೆಗೆ ಬಸವಣ್ಣನಿಗಿದ್ದ ಕಾಳಜಿಯಿಂದಾಗಿಯೇ ಮತ್ತಷ್ಟು ಅವರ ಹಾದಿಯಲ್ಲಿ ಮುಂದುವರಿದರು.

## KEYWORDS:

೧೨ನೇ ಶತಮಾನ, ಬಸವಣ್ಣ, ಕಾಯಕವೇ ಕೈಲಾಸ, ವಚನ ಯುಗ, ಸಮ ಸಮಾಜ.

12ನೇ ಶತಮಾನದ ಹಲವಾರು ಶಿವಶರಣರು ತಮ್ಮ ವಚನಗಳ ಮೂಲಕ ಸಮಾಜವನ್ನು ತಿದ್ದುವ ಕಾಯಕವನ್ನು ಮಾಡಿದ್ದಾರೆ. ವಚನ ಸಾಹಿತ್ಯ ಎಂದಾಗ ಬಸವಣ್ಣ ನಮಗೆ ನೆನಪಾಗುತ್ತಾರೆ. ಒಬ್ಬ ಕವಿಯಾಗಿ, ಸಮಾಜ ಸುಧಾರಕರಾಗಿ ಅಂದಿನ ಕಾಲಕ್ಕೆ ಪುರುಷರಷ್ಟೇ ಮಹಿಳೆಯರು ಸಮಾನರು ಎಂದು ತಮ್ಮ ಅನುಭವ ಮಂಟಪದಲ್ಲಿ ಸ್ಥಾನಮಾನ ನೀಡಿದರು. ಪ್ರಜಾಪ್ರಭುತ್ವದ ಪರಿಕಲ್ಪನೆಗಳಾದ ಅಸಮಾನತೆ ನಿವಾರಣೆ, ಶೋಷಣೆರಹಿತ ಸಮಾಜದ ನಿರ್ಮಾಣದ ಚಿಂತನೆ, ಮಹಿಳಾ ಸಬಲೀಕರಣವಾಗಬೇಕು ಎನ್ನುವ ದೃಷ್ಟಿಯಿಟ್ಟುಕೊಂಡೇ ಬಸವಾದಿ ಶರಣರು ಅನುಭವ ಮಂಟಪದ ಪರಿಕಲ್ಪನೆ ನಡೆಸಿದ್ದರು.

ಮಂಗಳವೇಡದ ರಾಜ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾದ ಬಸವಣ್ಣ ಹಲವಾರು ಜನಪರ ಮತ್ತು ಸಮಾಜ ಸುಧಾರಣೆಯ ಕ್ರಮಗಳನ್ನು ಕೈಗೊಂಡರು. 'ಕಾಯಕವೇ ಕೈಲಾಸ'ವೆಂದು ಸಾರಿ, ಜನರಲ್ಲಿ ದುಡಿದು ತಿಂದು ಬದುಕುವ ಮಹತ್ವವನ್ನು ತಿಳಿಸಿದರು. ಜಾತಿ, ಲಿಂಗ, ಭಾಷೆ ಭೇದವಿಲ್ಲದೆ, ಶರಣ ತತ್ವದಲ್ಲಿ, ಸಮಾನತೆಯಲ್ಲಿ ಮತ್ತು ಕಾಯಕ ನಿಷ್ಠೆಯಲ್ಲಿ ನಂಬಿಕೆಯುಳ್ಳವರನ್ನು ನಿಜವಾದ "ಶಿವಶರಣ"ರೆಂದು ಕರೆದರು.

ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ತ್ರೀಯರಿಗೆ ಭಾಗವಹಿಸುವ ಸಮಾನ ಅವಕಾಶ ನೀಡುವ ಮೂಲಕ ಮಹಿಳಾ ಸ್ವಾತಂತ್ರ್ಯಕ್ಕೊಂದು ಅರ್ಥವನ್ನು ಕಲ್ಪಿಸಿದರು. ವಿಧವೆಯರ ಪುನರ್ ವಿವಾಹಕ್ಕೆ ಪ್ರೋತ್ಸಾಹಿಸಿದ ಬಸವಣ್ಣನವರು ತಮ್ಮ ಅನುಭವ ಮಂಟಪದಲ್ಲಿ ಅಲ್ಲಮಪ್ರಭುವಿಗೆ ನೀಡಿದ ಪ್ರಾಮುಖ್ಯತೆಯನ್ನು ಅಕ್ಕಮಹಾದೇವಿಗೂ ನೀಡಿದರು. ಅನುಭವ ಮಂಟಪದಲ್ಲಿ ಸ್ತ್ರೀಯರು ಮುಕ್ತವಾಗಿ ಪಾಲ್ಗೊಳ್ಳಲು ಹಾಗೂ ಅಭಿಪ್ರಾಯ ವ್ಯಕ್ತಪಡಿಸಲು ಸಮಾನ ಅವಕಾಶ ಕಲ್ಪಿಸಿದರು. ಸಮಾಜದ ಸಮತೋಲನಕ್ಕಾಗಿ ಹೋರಾಡಿದ ನೇತಾರ, ಕಲುಷಿತಗೊಂಡಿದ್ದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ಧಿಕ್ಕರಿಸಿ, ಘನ ಬದಲಾವಣೆಯನ್ನು ಆರಿಸಿಹೊರಟ ದಾರ್ಶನಿಕ ಬಸವಣ್ಣ, ಸಾಮಾಜಿಕ ಬದಲಾವಣೆಗೆ ಹೊಸ ಭಾಷ್ಯ ಬರೆಯುವ ಮೂಲಕ ಉತ್ತಮ ಸಮಾಜ ವ್ಯವಸ್ಥೆಗೆ ನಿಜವಾದ ಅರ್ಥ ಕಲ್ಪಿಸಿ ಕೊಟ್ಟವರು.

ಅಂದಿನ ಕಾಲದಲ್ಲಿ ನಡೆಯುತ್ತಿದ್ದ ಧಾರ್ಮಿಕ ಮತ್ತು ಸಾಮಾಜಿಕ ಶೋಷಣೆಯ ಬಗ್ಗೆ ಧ್ವನಿ ಎತ್ತಿದ್ದಲ್ಲದೆ, ಢಾಂಬಿಕತೆ, ಮೌಢ್ಯ ಅಂಧಶ್ರದ್ಧೆಗಳ

ಮೂಲಕ ಸಾಮಾಜಿಕ ಶೋಷಣೆಗಳು ನಡೆಯುತ್ತಿದ್ದುದನ್ನು ಖಂಡಿಸಿದರು. ದೇವದಾಸಿ ಪದ್ಧತಿ, ಬಾಲ್ಯ ವಿವಾಹ, ಮೇಲು-ಕೀಳು, ಬಡವ-ಬಲ್ಲಿದ, ವರ್ಣ ಸಮಸ್ಯೆಗಳನ್ನು ಸಾರ ಸಗಟಾಗಿ ಖಂಡಿಸಿದ್ದಾರೆ. ಸಮಾಜದ ಇಂತಹ ಕೀಳುಮಟ್ಟದ ಶೋಷಣೆಯಿಂದಾಗಿಯೇ ಸಮಾಜದಲ್ಲಿ ದುಡಿಯುವ ಮತ್ತು ಕೂತು ಉಣ್ಣುವ ವರ್ಗಗಳು ನಿರ್ಮಾಣವಾಗುವುದಕ್ಕೆಕಾರಣವಾಗಿರಬೇಕು, ಸಮಾಜದಲ್ಲಿ ಮೇಲ್ವರ್ಗವೆಂದು ಕರೆಸಿಕೊಂಡ ಜನರು ಸಮಾಜದ ಇತರರನ್ನು ಕೀಳಾಗಿ ಕಾಣುತ್ತಿದ್ದ ಸಂದರ್ಭಗಳು ಬಸವಣ್ಣನ ಮನಸ್ಸನ್ನು ಬಹಳವಾಗಿ ಕಾಡಿದ್ದರ ಪರಿಣಾಮದಿಂದಲೇ ಅವರ ಮನಸ್ಸಿನ ವಿಚಾರಗಳೆಲ್ಲ ವಚನಗಳಾಗಿ ಮಾರ್ಪಟ್ಟವಾಗಿರಬೇಕು. ಅಂದಿನಿಂದಲೇ ಬಸವಣ್ಣನವರು ಸಾಮಾಜಿಕ ಬದಲಾವಣೆಗೆ ಕ್ರಾಂತಿಕಾರಿ ಹೆಜ್ಜೆ ಇಟ್ಟರೆಂದು ಕಾಣಿಸುತ್ತದೆ.

ಬಸವಣ್ಣನವರು ವಚನಗಳ ಹಾಗೂ ನಡೆನುಡಿಗಳ ಮೂಲಕ ಸಾರಿದ ತತ್ವ, ಆದರ್ಶಗಳು ಇಂದಿಗೂ ಮುಂದೆಯೂ ಎಲ್ಲರಿಗೂ ಮಾದರಿಯಾಗುವಂತವು. ವಾಸ್ತವ ಜಗತ್ತಿನಲ್ಲಿ ನಾವು ಊಹಿಸುತ್ತಿರುವ ಅಥವಾ ಕಣ್ಣಿಗೆ ಕಾಣದೇ ಇರುವ ಸ್ವರ್ಗ-ನರಕ, ಕೈಲಾಸ ವೈಕುಂಠಗಳು ಬೇರೆ ಇಲ್ಲವೆಂದು, ತಾವು ಮಾಡುವ ಕಾಯಕದಲ್ಲೇ ಕೈಲಾಸವನ್ನು ಕಾಣಬೇಕೆಂದು ಕರೆಕೊಟ್ಟಿದ್ದು ಮಾತ್ರವಲ್ಲದೆ ಅದರಂತೆ ನಡೆದ ಮಹಾನುಭಾವ ಅವರು. ಮಂದಿರಗಳಲ್ಲಿ ಪ್ರವೇಶಕ್ಕೆ ಇದ್ದ ನಿಷೇಧವನ್ನು ತೊಡೆಯಲು ಅಂಗೈಯಲ್ಲಿ ಲಿಂಗವಿಟ್ಟು 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ'ವೆಂದವರು. ಆ ಮೂಲಕ ಎಲ್ಲರಿಗೂ ಧಾರ್ಮಿಕ ಕೇಂದ್ರಗಳಲ್ಲಿ ಎಲ್ಲರಿಗೂ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟು ಶರಣರ ಪಾಲಿಗೆ ದೇವ ಮಾನವರಾದರು. ದೇವರನ್ನು ಕಾಣಲು ಎಲ್ಲಿಗೂ ಹೋಗಬೇಕೆಂದಿಲ್ಲ ಎಂದು,

**'ಎನ್ನ ಕಾಲೇ ಕಂಬ ದೇಹವೇ ದೇಗುಲ**
**ಶಿರವೇ ಹೊನ್ನ ಕಳಸವಯ್ಯ'**

ಎನ್ನುತ್ತಾ ತನ್ನ ಕಾಲನ್ನು ಕಂಬಮಾಡಿ, ದೇಹವನ್ನೇ ದೇಗುಲವಾಗಿಸಿ ಶಿರವನ್ನು ಚಿನ್ನದ ಕಳಸವನ್ನಾಗಿಸಿದ ಧರ್ಮ ಸುಧಾರಕ ಬಸವಣ್ಣ, ಆ ಮೂಲಕ ದೇಹದ ಮಹತ್ವವನ್ನು ತಿಳಿಸಿದ್ದಾರೆ. ಕೆಳವರ್ಗದ ಜನರಿಗೆ ದೇವರು, ಮಂದಿರಕ್ಕೆ ಪ್ರವೇಶ ನಿಷಿದ್ಧವಾಗಿದ್ದ ಸಂದರ್ಭದಲ್ಲಿ ದೇಹವನ್ನೇ

ದೇಗುಲವಾಗಿಸಿ ದೇವರ ಕಲ್ಪನೆಯನ್ನು ಹಿರಿದಾಗಿಸಿದರು.

'ದಯವೇ ಧರ್ಮದ ಮೂಲ'ವೆಂದು ಸಾರುವ ಮೂಲಕ ಸಮಾಜದಲ್ಲಿ ನಡೆಯುತ್ತಿದ್ದ ದಬ್ಬಾಳಿಕೆಗೆ ಉತ್ತರವನ್ನು ನೀಡಿದ್ದಾರೆ. ದಯೆ, ಜಾತಿ-ವರ್ಗ, ಮೇಲು-ಕೀಳು, ಸತ್ಯ-ಅಸತ್ಯಗಳನ್ನು ತೊಡೆದು ಹಾಕಲು ಪಣತೊಟ್ಟ ಬಸವಣ್ಣ,

**'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,**
**ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ'**

ಎನ್ನುತ್ತಾ ವೃತ್ತಿ ಹುಟ್ಟಿನಿಂದ ಬಂದದ್ದಲ್ಲವೆಂದು, ಆತನ ಕಾಯಕದ ಮೂಲಕ ಆತನ ಜಾತಿಯನ್ನು ಗುರುತಿಸುವುದಲ್ಲವೆಂದು ಮಾನವನ ಅಸ್ಮಿತೆಗೆ ನಿಜವಾದ ಅರ್ಥವನ್ನು ಕಲ್ಪಿಸಿದ್ದಾನರೆ. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಆದಿ ಕವಿ ಪಂಪನ ಮಾತು ಇಲ್ಲಿ ಉಲ್ಲೇಖನಿಯ. ಒಂದರ್ಥದಲ್ಲಿ ಸಮಾಜದ ಧ್ವನಿಯಾಗಿ, ಅಂಕು ಡೊಂಕುಗಳನ್ನು ಗುರುತಿಸಿ ಮಾತಿನಲ್ಲೇ ಸರಿಪಡಿಲು ಪ್ರಯತ್ನಿಸಿದ ನಿಷ್ಠುರವಾದಿ.

ಮಾತನ್ನು ಹೇಗೆ ಬಳಸಬೇಕೆಂದು ಮಾದರಿಯಾದ ಬಸವಣ್ಣ ಮಾತನ್ನೇ ವಚನವಾಗಿಸಿದ. ತಾನು ಆಡಿದ ಒಂದೊಂದು ನುಡಿಯೂ ಶ್ರೇಷ್ಠವಾಗುವ ಮೂಲಕ

**'ನುಡಿದರೆ ಮುತ್ತಿನ ಹಾರದಂತಿರಬೇಕು**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು**
**ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು**
**ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು**
**ನುಡಿಯೊಳಗಾಗಿ ನಡೆಯದಿದ್ದರೆ**
**ಕೂಡಲಸಂಗಮನೆಂತೊಲಿವನಯ್ಯ?'**

ನಮ್ಮನುಡಿ ಹೇಗಿರಬೇಕು ಎನ್ನುವುದರ ಜತೆಗೇ ನಾವು ಹೇಗಿರಬೇಕು ಎನ್ನುವುದನ್ನು ಸೂಚಿಸುತ್ತದೆ. ಆಧುನಿಕ ದಿನಮಾನದಲ್ಲಿ ಅತ್ಯಂತ ಪ್ರಸ್ತುತವೆನಿಸುತ್ತದೆ ಈ ವಚನದ ಭಾಗ. ಇನ್ನು ಕುಲದ ವಿಚಾರ ಬಂದಾಗ "ಕುಲವನರಸುವರೆ ಶರಣರಲ್ಲಿ ಜಾತಿ ಸಂಕರವಾದ ಬಳಿಕ?" ಎಂದು ಪ್ರಶ್ನಿಸುವ ಮೂಲಕ ಶರಣರೆಂದರೆ ಎಲ್ಲರೂ ಒಂದೇ ಅವರಲ್ಲಿ ಜಾತಿಯ ಪ್ರಶ್ನೆ ಬರುವುದಿಲ್ಲ ಎಂದಿದ್ದಾರೆ ಬಸವಣ್ಣನವರು. ಇದೇ ಮಾತು ಕನಕದಾಸರಿಗೂ ಪ್ರೇರಣೆಯಾಯಿತೋ ಏನೋ. . ಹಾಗಾಗಿ ಅವರು ತಮ್ಮ

ಕೀರ್ತನೆಯಲ್ಲಿ ‘ಕುಲ ಕುಲವೆಂದು ಹೊಡೆದಾಡದಿರಿ’ ಎಂದು ಮೂಢ ಜನರನ್ನು ಎಚ್ಚರಿಸಿದ್ದು. ಒಂದು ಕಡೆ ಬಸವಣ್ಣ,

**‘ಕಲ್ಲನಾಗರ ಕಂಡರೆ ಪಾಲನೆರೆಯೆಂಬರು**
**ದಿಟದ ನಾಗ ಕಂಡಡೆ ಕೊಲ್ಲೆಂಬರಯ್ಯಾ’**

ಎಂದರು. ಇಲ್ಲಿ ಬಡತನದ ಕಷ್ಟವನ್ನು ಕಣ್ಣಾರೆ ಕಂಡಿದ್ದ ಬಸವಣ್ಣನ ಮನಸ್ಸನ್ನು ನೇರವಾಗಿಯೇ ಇರಿದಿರಬೇಕು. ಹಾಗಾಗಿ ಕಲ್ಲಿಗೆರೆಯುವ ಹಾಲು ತುಪ್ಪ ಬಡವರ ಹೊಟ್ಟೆ ಸೇರಲಿ ಎಂಬ ಇಂಗಿತವಿದ್ದೀತು ವಚನವೊಂದರಲ್ಲಿ

**‘ವಾರವೆಂದರಿಯೆ, ದಿನವೆಂದರಿಯೆ ಏನೆಂದರಿಯೆನಯ್ಯಾ**
**ಇರುಳೆಂದರಿಯೆ, ಹಗಲೆಂದರಿಯೆ ಏನೆಂದರಿಯೆನಯ್ಯಾ,**
**ನಿಮ್ಮ ಪೂಜಿಸಿ ಎನ್ನುವ ಮರೆದೆ ಕೂಡಲಸಂಗಮದೇವಾ’**

ಎನ್ನುವ ಮೂಲಕ ಯಾವುದೇ ಸತ್ಕಾರ್ಯಕ್ಕೆ ದಿನ, ವಾರ, ತಿಂಗಳುಗಳ ಅವಶ್ಯಕತೆ ಇಲ್ಲ. ತಕ್ಷಣ ನೆರವೇರಿಸಬೇಕೆಂಬ ಸಂದೇಶವಿದೆ. ಮಾದರಿ ಸಮಾಜದ ನಿರ್ಮಾತೃ ಆಗಿ ಬಸವಣ್ಣನವರು 12ನೇ ಶತಮಾನದಲ್ಲಿ ಕಾಣಿಸಿಕೊಂಡು ಅಸ್ಪೃಶ್ಯರು, ಮಹಿಳೆಯರು, ಬಡವರು ಮತ್ತು ಎಲ್ಲ ಕಾಯಕಜೀವಿಗಳನ್ನು ಸರ್ವಸಮಾನವಾಗಿ ನಡೆಸಿಕೊಂಡವರು.

‘ವಸುಧೈವ ಕುಟುಂಬಕಮ್’ ಎಂಬ ಪರಿಕಲ್ಪನೆ ಬಸವಣ್ಣನ ವಚನಗಳಲ್ಲಿ ಕಾಣಿಸಿ ಕೊಂಡಿರುವುದು ಹೀಗೆ –‘ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ’ ಎನ್ನುವ ಮೂಲಕ ಎಲ್ಲರೂ ನಮ್ಮವರೆಂದೆ ತಿಳಿಯಿರಿ ಅದರಿಂದ ಸಮಾಜ ವ್ಯವಸ್ಥೆಯಲ್ಲಿ ಸೌಹಾರ್ದತೆಯಿಂದ ಬದುಕುವುದಕ್ಕೆ ಸಾಧ್ಯ ಎಂಬ ಸಂದೇಶವನ್ನು ಸಾರಿದ್ದಾರೆ.

ಸಾಮಾಜಿಕವಾದ ವರ್ಗ ಸಂಘರ್ಷಗಳಿಗೆ ತಿಲಾಂಜಲಿ ನೀಡಬೇಕೆನ್ನುವ ಅವರ ತುಡಿತ ವಚನಗಳಲ್ಲಿ ನಾವು ಕಾಣುತ್ತೇವೆ. ಅದೆಷ್ಟೋ ಸಾಮಾಜಿಕ ತೊಡಕುಗಳನ್ನು ಮಾತಿನ ಮೂಲಕ ಹಾಗೂ ನಡೆಯ ಮೂಲಕ ಸರಿಪಡಿಸಿ ಮಾದರಿಯಾದಂತವರು. ಸಮಾನತೆಯ ಹರಿಕಾರನಾಗಿ, ಸಮಾಜ ಸುಧಾರಕರಾಗಿ, ಚಿಂತಕರಾಗಿ, ಸಾಮಾಜಿಕ ನ್ಯಾಯದ ನ್ಯಾಯವಾದಿಯಾಗಿ ಗುರುತಿಸಿಕೊಂಡ ಮಹಾನುಭಾವ. ಬಸವಣ್ಣನವರ ಚಿಂತನೆಗಳು ಕೇವಲ ಒಂದು ವರ್ಗಕ್ಕೋ, ಒಂದು

ಸಮುದಾಯಕ್ಕೋ ಸೀಮಿತವಾಗಿಲ್ಲ. ಶತ ಶತಮಾನಗಳು ಕಳೆದರೂ ಅವರ ವಿಚಾರಗಳು ಜೀವಂತಿಕೆಯಿಂದ ಕೂಡಿವೆ.

## ಪರಾಮರ್ಶನ ಗ್ರಂಥಗಳು:


1. ಸತೀಶ್ ಕೆ. ಪಾಟೀಲ. (2023). ಸಾಮಾಜಿಕ ಸಮಾನತೆಯ ಹರಿಕಾರ ಶ್ರೀ ಬಸವಣ್ಣನವರು. ಲೋಕ ದರ್ಶನ.
2. ಶಿವರಾಜಪ್ಪ ಎಸ್. (2010). ಸಮಗ್ರ ಸಾಹಿತ್ಯ-2: ಶರಣ ದರ್ಶನ. ವಿಜಯಲಕ್ಷ್ಮೀ ಪ್ರಕಾಶನ. ಮೈಸೂರು.
3. ಶ್ರೀನಿವಾಸಮೂರ್ತಿ ಎಂ. ಆರ್. (2023). ವಚನ ಧರ್ಮಸಾರ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.